ಇಂದು ದಿನಾಂಕ 10-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ಎಸ್.ಎಂ.ಬಿ. ವಕೀಲರಿಂದಃ**

ಆ ದಿನ ನಾನು ಬಸ್‌ನಲ್ಲಿ ಎಡಗಡೆ ಸೀಟಿನಲ್ಲಿ ಕುಳಿತಿದ್ದೆ. ನಾನು ಸ್ವಲ್ಪ ಎಚ್ಚರದಲ್ಲೇ ಇದ್ದೆ. ಅಪಘಾತವಾದ ನಂತರ ನನ್ನನ್ನು ದಾವಣಗೆರೆಯ ಚಿಟಗೇರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರು . ಅಲ್ಲಿ ವೈದ್ಯರು ನನ್ನನ್ನು ಕೇಳಿ ಗಾಯದ ಬಗ್ಗೆ ಬರೆದುಕೊಂಡಿರುತ್ತಾರೆ. ನಾನು ಬಸ್‌ನಲ್ಲಿ ಹಿಂದೆ ಕುಳಿತಿದ್ದರಿಂದ ಅಪಘಾತ ಯಾವ ರೀತಿಯಾಯಿತು ಹಾಗೂ ಯಾರ ತಪ್ಪಿನಿಂದ ಆಯಿತು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಬಸ್ ಹೋಗುತ್ತಿರುವಾಗ ಲಾರಿ ಬಂದು ಮುಖಾಮುಖಿಯಾಗಿ ಡಿಕ್ಕಿ ಮಾಡಿದೆ. ಬಸ್ ಚಾಲಕನ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ . ಅಪಘಾತದಲ್ಲಿ ನನಗೆ ಯಾವುದೇ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ . ತುಟಿಗೆ ಏಟಾಗಿ ಹಲ್ಲು ಕಟ್ಟಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ . ಅಪಘಾತ ಬಸ್ ಚಾಲಕನ ತಪ್ಪಿನಿಂದ ಆಗಿರುವುದರಿಂದ 2 ನೇಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ . ಅಪಘಾತ ಸಮಯದಲ್ಲಿ ನಾನು ಮೀನುಗಾರಿಕೆ ಮಾಡುತ್ತಿದ್ದೆ ಅದರಿಂದ ತಿಂಗಳಿಗೆ ರೂ . 45,000-00 ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ಆದ ಗಾಯದಿಂದ ನನಗೆ ಆದಾಯದಲ್ಲಿ ಯಾವುದೇ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಹಾಗೂ ಪ್ರಮಾಣಪತ್ರದಲ್ಲಿ ಬರೆದಷ್ಟು ಹಣವನ್ನು ಚಿಕಿತ್ಸೆಗಾಗಿ , ತಿರುಗಾಟಕ್ಕಾಗಿ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ನಾನು ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತಸಮಯದಲ್ಲಿ ನನಗೆ 65 ಕ್ಕಿಂತ ಜಾಸ್ತಿ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಈಗ ನನಗೆ 62 ವರ್ಷ ಎಂದು ನುಡಿದಿರುತ್ತಾರೆ. ಅಪಘಾತ ಸಮಯದಲ್ಲಿ ಲಾರಿ ಚಾಲಕನಿಗೆ ಸೂಕ್ತ ಚಾಲನಾ

ಪರವಾನಿಗೆ ಇರಲಿಲ್ಲ ಹಾಗೂ ಲಾರಿಗೆ ಫಿಟನೆಸ್ ಹಾಗೂ ಪರ್ಮಿಟ್ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ . ಆ ಕಾರಣದಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಎದುರುದಾರರ ಪರ ಶ್ರೀ ವೈ.ವಿ.ಎಸ್. ವಕೀಲರಿಂದಃ**

ಅಪಘಾತದ ನಂತರ ನಾನು ಲಾರಿ ಅತೀ ವೇಗವಾಗಿ ಮುಂದುಗಡೆ ಹೋಗುತ್ತಿತ್ತು , ಏಕಾಏಕಿ ಯಾವುದೇ ಸಂಜ್ಞೆ ತೋರಿಸದೇ ಬ್ರೇಕ್ ಹಾಕಿದ್ದರಿಂದ ಹಿಂದಿನಿಂದನಿಧಾನವಾಗಿ ಹೋಗುತ್ತಿದ್ದ ಬಸ್ ಡಿಕ್ಕಿಯಾಯಿತು ಎಂದು ಗೊತ್ತಾಯಿತು . ಅಪಘಾತದ ನಂತರ ಲಾರಿಯ ಚಾಲಕ ಪರಾರಿಯಾಗಿರುತ್ತಾನೆ ಎಂದರೆ ಸರಿ. ಈ ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ, ಬಸ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ. ಲಾರಿ ಮಾಲಿಕರು ಹಾಗೂ ಸದರಿ ವಾಹನದಇನ್ಸೂರೆನ್ಸ ಕಂಪನಿಯವರು ಮಾತ್ರ ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿ.

ಈ ಹಂತದಲ್ಲಿ 4 ನೇ ಎದುರುದಾರರ ಪರ ವಕೀಲರು 2 ನೇ ಎದುರುದಾರರ ಮೇಲ್ಕಂಡ ಪಾಟೀ ಸವಾಲನ್ನು ಅನುಮೋದಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.
ಕುಮಟಾ